ಕರ್ನಾಟಕ ವಿಧಾನಸಭೆ

ಮಂಗಳವಾರ 18ನೇ ಫೆಬ್ರವರಿ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ರವರು,

ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬಿಜಾಪುರ ತಾಲ್ಲೂಕಿನ "ತಿಡಗುಂದಿ ಹಾಗೂ ಭೂತನಾಳ"ನಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭ

61(591) ಶ್ರೀ ಶಿವಾನಂದ ಎಸ್.ಪಾಟೀಲ್(ತಿಕೋಟ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬಿಜಾಪುರ ತಾಲ್ಲೂಕಿನ 'ತಿಡಗುಂದಿ' ಹಾಗೂ 'ಬುತನಾಳ' 33 ಕೆ.ವಿ. ಸ್ಟೇಷನ್ ಕೆಲಸದ ಕಾರ್ಯಾರಂಭ ಆಗಿದೆಯೇ, ಕಳೆದ ವರ್ಷವೇ ಪೂರ್ಣಗೊಳಿಸಬೇಕಾಗಿದ್ದ ಈ ಕಾರ್ಯಾರಂಭ ತಡವಾಗಲು ಕಾರಣಗಳೇನು:

(ಅ) ಈ 33 ಕೆ.ವಿ. ಸ್ಟೇಷನ್‌ಗೆ ಲೈನ್ ಎಳೆಯುವುದರಲ್ಲಿ ಯಾವುದಾದರೂ ತಾಂತ್ರಿಕ ದೊಷಗಳು ಇದ್ದಾವೆಯೇ ಹಾಗಿದ್ದಲ್ಲಿ ಈ ಲೋಪದೋಷಗಳೇನು, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ. ಶರಣಬಸಪ್ಪ ದರ್ಶನಾಪುರ(ಇಂಧನ ರಾಜ್ಯ ಸಚಿವರು):

(ಅ) ಬಿಜಾಪುರ ತಾಲ್ಲೂಕಿನ 'ತಿಡಗುಂದಿ' ಹಾಗೂ 'ಭೂತನಾಳ' ಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳ ನಿರ್ಮಾಣ ಕಾರ್ಯವು ಇನ್ನೂ ಪ್ರಾರಂಭಗೊಳ್ಳ ಬೇಕಾಗಿದೆ. ಸ್ಟೇಷನ್‌ಗಳ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ವಶಪಡಿಸಿಕೊಳ್ಳುವಲ್ಲಿ ಉಂಟಾದ ಅಡೆತಡೆಗಳು ಸ್ಟೇಷನ್‌ಗಳ ನಿರ್ಮಾಣವನ್ನು ಪ್ರಾರಂಭಿಸುವಲ್ಲಿ ಉಂಟಾಗಿರುವ ವಿಳಂಬಕ್ಕೆ ಮುಖ್ಯ ಕಾರಣವಾಗಿದೆ.

(ಅ) ಬಿಜಾಪುರ ಹಾಲಿ ಇರುವ 110 ಕೆ.ವಿ. ಸ್ಟೇಷನ್‌ನಿಂದ 33 ಕೆ.ವಿ. ಲೈನನ್ನು ಎಳೆಯಲು ಈ ಹಿಂದೆ ಉದ್ದೇಶಿಸಲಾಗಿತ್ತು. ಈ ಮಾರ್ಗವು ಜನನಿಬಿಡ ಪ್ರದೇಶಗಳಲ್ಲಿ ಹಾದುಹೋಗುವುದರಿಂದ ಉಂಟಾಗಬಹುದಾದ ಸ್ಥಳ ಸಮಸ್ಯೆಗಳಿಂದಾಗಿ (ಮೇಲಿನ ಸಮಸ್ಯೆಗಳು) ಬಿಜಾಪುರ ನಗರದ ಹೊರವಲಯದಲ್ಲಿರುವ ಬಿಜಾಪುರ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಹೊಸ 110 ಕೆ.ವಿ. ಸ್ಟೇಷನ್ನಿಂದ ಈ ಎರಡು ಸ್ಟೇಷನ್‌ಗಳಿಗೆ ಬೇಕಾಗುವ 33 ಕೆ.ವಿ. ಲೈನನ್ನು ನಿರ್ಮಾಣಮಾಡಲು ಈಗ ಉದ್ದೇಶಿಸಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿನ 'ತಿಡಗುಂದಿ' ಮತ್ತು 'ಭೂತನಾಳ' ಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ಮಾಡುತ್ತೆವೆಂದು 1995-96 ನೇ ಸಾಲಿನಲ್ಲಿ ಆ ಕೆಲಸವನ್ನು ಪೂರೈಸಲಾಗುತ್ತದೆಂದು ಆಶ್ವಾಸನೆ ಕೊಡಲಾಗಿತ್ತು. ಆದರೆ, ಇದುವರೆಗೂ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ನನ್ನ ಎರಡನೇ ಪ್ರಶ್ನೆಗೆ, ಬಿಜಾಪುರದಲ್ಲಿ ಹಾಲಿ ಇರುವ 110 ಕೆ.ವಿ. ಸ್ಟೇಷನ್‌ನಿಂದ 33 ಕೆ.ವಿ. ಲೈನನ್ನು ಎಳೆಯಲು ಈ ಹಿಂದೆ ಉದ್ದೇಶಿಸಲಾಗಿತ್ತು. ಈ ಮಾರ್ಗವು ಜನನಿಬಿಡ ಪ್ರದೇಶಗಳಲ್ಲಿ ಹಾದುಹೋಗುವುದರಿಂದ ಉಂಟಾಗಬಹುದಾದ ಸ್ಥಳ ಸಮಸ್ಯೆಗಳಿಂದಾಗಿ ಬಿಜಾಪುರ ನಗರದ ಹೊರ ವಲಯದಲ್ಲಿರುವ ಬಿಜಾಪುರ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಹೊಸ 110 ಕೆ.ವಿ. ಸ್ಟೇಷನ್‌ನಿಂದ ಈ ಎರಡು ಸ್ಟೇಷನ್‌ಗಳಿಗೆ ಬೇಕಾಗುವ 33 ಕೆ.ವಿ. ಲೈನನ್ನು ನಿರ್ಮಾಣ ಮಾಡಲು ಈಗ ಉದ್ದೇಶಿಸಿದೆ ಎಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಆದರೂ ಆ ಬಗ್ಗೆಯೂ ಇನ್ನೂ ಕಾರ್ಯಾರಂಭ ಮಾಡದೇ ಇರುವುದರಿಂದ ಬಿಜಾಪುರ ತಾಲ್ಲೂಕು ಇವತ್ತಿನ ದಿವಸ ಕತ್ತಲಿನಲ್ಲಿ ಇರುವಂಥ ಪರಿಸ್ಥಿತಿ ನಿರ್ಮಾಣ ಉಂಟಾಗಿದೆ. ಆದುದರಿಂದ, ಅದಷ್ಟು ಬೇಗ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ: ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕಿನ 'ತಿಡಗುದಿ' ಮತ್ತು 'ಭೂತನಾಳ' ಗಳಲ್ಲಿ ವಿದ್ಯುಚ್ಛಕ್ತಿ ತೊಂದರೆಯಾಗಿರುವ ಬಗ್ಗೆ ನಾನೇ ಸ್ವತ: ಬಿಜಾಪುರಕ್ಕೆ ಹೋಗಿ ಅಲ್ಲಿನ ಅಧಿಕಾರಿಗಳು ಹಾಗೂ ಮುಖ್ಯಸ್ಥರೊಡನೆ ಚರ್ಚೆ ಮಾಡಿದ್ದೇನೆ. 'ತಿಡಗುಂದಿ' ಮತ್ತು 'ಭೂತನಾಳ' ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಸ್ಟೇಷನ್ ಮಾಡುವುದಕ್ಕೆ ಭೂಮಿಯನ್ನು ವಶಪಡಿಸಿಕೊಳ್ಳುವ ಕೆಲಸ ಇನ್ನೂ ಮುಗಿದಿಲ್ಲ.

ಇದು ಬಿಜಾಪುರ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರಬೇಕಾಗಿತ್ತು. ಮಾನ್ಯ ಸದಸ್ಯರು ಹೇಳಿದಂತೆ ಅವರ ಕಾಲದಲ್ಲೇ ಭೂಮಿ ಕೊಟ್ಟಿರುವುದಿದ್ದರೂ ಇರಬಹುದು ಆದರೆ ಮುನಿಸಿಪಾಲಿಟಿಯಿಂದ ನಮಗೆ ಯಾವ ಪತ್ರವೂ ಬಂದಿಲ್ಲ. ಕೂಡಲೇ ಆ ಭೂಮಿಯನ್ನು ಅದಷ್ಟು ಬೇಗ ಸ್ವಾಧೀನಮಾಡಿಕೊಂಡು ತಿಡಗುಂದಿ ಹಾಗೂ ಭೂತನಾಳಗಳಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ನಿರ್ಮಿಸಲಾಗುವುದು ಅದರಿಂದ ಆ ಪ್ರದೇಶದ ವಿದ್ಯುತ್ ಕೊರತೆ ನೀಗಲು ಸಹಾಯವಾಗುವುದು.

ಶ್ರೀ ಶಿವಾನಂದ ಪಾಟೀಲ್: ಕೆಲಸ ಪ್ರಾರಂಭಿಸಲು ಟೆಂಡರ್ ಯಾವಾಗ ಕರೆಯುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ: ಈಗಾಗಲೇ ಆಡಳಿತ ಅನುಮೋದನೆ ದೊರಕಿದೆ ಟೆಂಡರನ್ನು ಕೂಡಲೇ ಕರೆಯಲಾಗುವುದು.

ಪುತ್ತೂರು ತಾಲ್ಲೂಕಿನಲ್ಲಿ ಮಸೀದಿಗಳಿಗೆ ಹಣ ಮಂಜೂರಾತಿಯ ಬಗ್ಗೆ

62(412) ಶ್ರೀ ಡಿ.ವಿ. ಸದಾನಂದ ಗೌಡ, ಶಾಸಕರು(ಪುತ್ತೂರು):

ಮಾನ್ಯ ಗೃಹ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?